ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: ಎಸ್‌ಎಸ್‌ಯು/ಕೋವಿಡ್–19/19/2020–21 ದಿನಾಂಕ: 05.08.2020

**ಸುತ್ತೋಲೆ**

ವಿಷಯ: ಕೋವಿಡ್ 19 ಪ್ರಯೋಗಾಲಯಗಳ ಸಮರ್ಪಕ ಬಳಕೆ ಬಗ್ಗೆ.
ಉಲ್ಲೇಖ 1: ಸುತ್ತೋಲೆ ಸಂಖ್ಯೆ: ಎಸ್‌ಎಸ್‌ಯು/ಕೋವಿಡ್–19/06/2020–21, ದಿನಾಂಕ: 16.07.2020
2: ಸುತ್ತೋಲೆ ಸಂಖ್ಯೆ: ಎಸ್‌ಎಸ್‌ಯು/ಕೋವಿಡ್–19/19/2020–21, ದಿನಾಂಕ: 16.07.2020

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೋವಿಡ್–19 ಸೋಂಕನ್ನು ಸಮರ್ಥವಾಗಿ ನಿಯಂತ್ರಣ ಮಾಡಲು ಮಾದರಿಗಳ ಪರೀಕ್ಷೆಗಳ ಸಾಮರ್ಥ್ಯವನ್ನು ಹೆಚ್ಚಿಸಿರುವುದು ಸರಿಯಷ್ಟೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ಹೆಚ್ಚಿಸಲು ಜಿಲ್ಲೆಗಳಿಗೆ ಗುರಿಗಳನ್ನು ನಿಗದಿಪಡಿಸಿದ್ದು, ಅದಕ್ಕೆ ಅನುಗುಣವಾಗಿ RAT ಮತ್ತು RTPCR ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಈ ಕುರಿತಂತೆ ಈಗಾಗಲೇ ಉಲ್ಲೇಖ (1) ಮತ್ತು (2) ರಂತೆ ಮಾರ್ಗದರ್ಶನ ನೀಡಲಾಗಿದ್ದು, ಮುಂದುವರೆದಂತೆ, ಕೋವಿಡ್–19 ಪ್ರಯೋಗಾಲಯಗಳು ಕಡ್ಡಾಯವಾಗಿ ಈ ಕೆಳಕಂಡಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

1. ಎಲ್ಲಾ ಪ್ರಯೋಗಾಲಯಗಳು ತಮ್ಮ ಗರಿಷ್ಠ ಸಾಮರ್ಥ್ಯಕ್ಕನುಗುಣವಾಗಿ ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುವುದು.
2. ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸಲು ಅಗತ್ಯವಿರುವ ತರಬೇತಿ ಹೊಂದಿದ ಮಾನವ ಸಂಪನ್ಮೂಲ ಇರುವಂತೆ ನೋಡಿಕೊಳ್ಳುವುದು. ಹೆಚ್ಚುವರಿ ಮಾನವ ಸಂಪನ್ಮೂಲ/ತರಬೇತಿ ಅಗತ್ಯವಿದ್ದಲ್ಲಿ, ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಮೂಲಕ ಪಡೆಯಲು ಅಗತ್ಯ ಕ್ರಮವಹಿಸುವುದು. ಕ್ರಮ ಕೈಗೊಂಡ ಕುರಿತ ಮಾಹಿತಿಯನ್ನು ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರಿಗೆ ನೀಡುವುದು.
3. ಪ್ರಯೋಗಾಲಯ ಸಿಬ್ಬಂದಿಯವರು ಕೊರೋನಾ ಸೋಂಕಿತರಾದರೆ, ಪ್ರಯೋಗಾಲಯವನ್ನು ನಿಯಮಾನುಸಾರ ಸೋಂಕು ಮುಕ್ತಗೊಳಿಸಲು ಅಗತ್ಯ ಕ್ರಮಗಳನ್ನು 24 ಗಂಟೆಗಳೊಳಗಾಗಿ ತೆಗೆದುಕೊಳ್ಳುವುದು.
4. ಪ್ರತಿ ಪ್ರಯೋಗಾಲಯವು ತರಬೇತಿ ಪಡೆದ ಬ್ಯಾಕ್ ಅಪ್ ಸಿಬ್ಬಂದಿಗಳ (ಪ್ರಯೋಗಶಾಲಾ ತಂತ್ರಜ್ಞರು, ಮೈಕ್ರೊಬಯಾಲಜಿಸ್ಟ್, ಗಣಕಯಂತ್ರ ಸಹಾಯಕರು) ತಂಡವನ್ನು ಹೊಂದಿರತಕ್ಕದ್ದು ಹಾಗೂ ಯಾವುದೇ ಸಿಬ್ಬಂದಿ ಸೋಂಕಿತರಾದಲ್ಲಿ/ಸಂಪರ್ಕಿತರಾದಲ್ಲಿ ಅವರ ಬದಲಿಗೆ ಇನ್ನೊಬ್ಬರು ಕಾರ್ಯ ನಿರ್ವಹಿಸಲು ಕೂಡಲೇ ಕ್ರಮ ತೆಗೆದುಕೊಳ್ಳುವುದು.



3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಸುಪರ್ದಿಯಲ್ಲಿ ಬರುವ ಎಲ್ಲಾ ಪ್ರಯೋಗಾಲಯಗಳು ಮೇಲೆ ಸೂಚಿಸಿರುವಂತೆ ಕಾರ್ಯ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳುವುದು.

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
4. ನಿರ್ದೇಶಕರು, ಆಕುಕ ಸೇವೆಗಳು.